**CC No.1431/2023**
**CW:1**
**PW:1**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ರವರ ನ್ಯಾಯಾಲಯ, ಧಾರವಾಡ.**

**ಸಿಸಿ ನಂಃ 1431/2023**

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 24.07.2026.**

**ಮುಂದುವರೆದ ಮುಖ್ಯ ವಿಚಾರಣೆ:ಮಾನ್ಯ ಹಿಸಸಅ ರವರಿಂದ**

ಈಗ ನ್ಯಾಯಾಲಯಕ ಮುಂದೆ ಇರುವ ಕಬ್ಬಿಣ ರಾಡ್ ನಿಂದ ಆರೋಪಿ ನನಗೆ ಹಲ್ಲೆ ಮಾಡಿರುತ್ತಾನೆ. ಅದರಿಂದ ಹಲ್ಲೇ ಮಾಡಿದ ನಂತರ ಆರೋಪಿ ಅಲ್ಲೇ ಬಿಸಾಕಿ ಹೋಗಿರುತ್ತಾರೆ. ಸಾಕ್ಷೀ ಗುರುತಿಸಿದ ಮೇರೆಗೆ ಸದರಿ ಕಬ್ಬಿಣ ರಾಡ್‌ನ್ನು **ಎಂ.ಓ.01** ಎಂದು ಗುರುತಿಸಲಾಯಿತು. ನನಗೆ ಹಲ್ಲೇ ಮಾಡಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿ ಗೈರು ಹಾಜರು ಆಗಿದ್ದು, ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ, ಸದರಿ ಆರೋಪಿಯ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಕರಾರು ಮಾಡಿರುವುದಿಲ್ಲ). ನನಗೆ ಹಲ್ಲೇ ಆಗಿದ್ದರಿಂದ ರಕ್ತಗಾಯವಾಗಿದ್ದು ಚಿಕಿತ್ಸೆ ಪಡೆದಿದ್ದರಿಂದ ದೂರು ಕೊಡುವಲ್ಲಿ ವಿಳಂಬವಾಗಿರುತ್ತದೆ. ನಂತರ ನಾನು ಪೋಲೀಸರಿಗೆ ಮುಂದುವರೆದ ಹೇಳಿಕೆ ಹೇಳಿರುತ್ತೇನೆ.

ಆರೋಪಿ ಹಣ ಹಿಂತಿರುಗಿಸುವಂತೆ ಕೇಳಿದಾಗ ನಾನು ಸ್ವಲ್ಪ ಸಮಯವಕಾಶ ಕೊಡುವಂತೆ ಕೇಳಿದೆ. ಆರೋಪಿ ಹಲ್ಲೇ ಮಾಡಿದ್ದರಿಂದ ನನ್ನ ಎಡ ತಲೆಯಲ್ಲಿ ಏಟಾಗಿತ್ತು. ಘಟನಾ ಕಾಲಕ್ಕೆ ಆರೋಪಿಯ ಜೋತೆಗೆ ಇದ್ದ ಕದಂ

**CC No.1431/2023**
**CW:1**
**PW:1**

ಎನ್ನುವವರು ನನ್ನನ್ನು ನೂಕಾಡಿ ಕೈಗಳಿಂದ ಹೋಡೆದಿರುತ್ತಾರೆ. ಆರೋಪಿ ಮತ್ತೇ ಬೇರೆ ಏನನ್ನು ಮಾಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಹಿಸಸಅ ರವರು ಮುಂದುವರೆದ ಮುಖ್ಯ ವಿಚಾರಣೆ ಸಮಯ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.**